ವಿಜಯ ಕರ್ನಾಟಕ
ಸೋಮವಾರ 5 ಡಿಸೆಂಬರ್ 2005

# ಆರ್ಥಿಕ ಅಭಿವೃದ್ಧಿಯ ಹಿನ್ನೆಲೆಯಲ್ಲಿ ನಿಸರ್ಗ ಸಂರಕ್ಷಣೆ

1990ರ ದಶಕದ ಪ್ರಾರಂಭದಲ್ಲಿ ಉದಯಿಸಿದ ಆರ್ಥಿಕ ಉದಾರೀಕರಣದ ಶಕೆಯು ಇಂದು ಭಾರತವು ಆರ್ಥಿಕ ಅಭಿವೃದ್ಧಿಯ ದಿಸೆಯಲ್ಲಿ ಶೇ. 8ರ ದರವನ್ನು ತಲುಪುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅಧಿಕಾರಷಾಹಿ ಪೂರ್ವಾಗ್ರಹಗಳನ್ನು ಕಡಿದೊಗೆದು ಹೊಚ್ಚಹೊಸ ಧೋರಣೆಗಳನ್ನು ಅಳವಡಿಸಿಕೊಂಡ ಪರಿಣಾಮವಾಗಿ ಈ ತ್ವರಿತಗತಿಯ ಪ್ರಗತಿ ಸಾಧ್ಯವಾಗಿದೆ.

ಸಾಮಾಜಿಕ ಹಾಗೂ ಆರ್ಥಿಕ ಆಶೋತ್ತರಗಳೊಡನೆ ಮುನ್ನಡೆಯ ಬಯಸುವ ನೂರು ಮಿಲಿಯಕ್ಕೂ ಹೆಚ್ಚು ಜನರಿರುವ ನಮ್ಮ ದೇಶದಲ್ಲಿ ಇಂತಹ ನಿಯಂತ್ರಿತ ಆರ್ಥಿಕ ಅಭಿವೃದ್ಧಿಯ ಜತೆಜತೆಗೇ ನಮ್ಮ ನಾಡಿನ ಜೀವವೈವಿಧ್ಯವನ್ನು ವನ್ಯಸಂಪತ್ತನ್ನೂ ಉಳಿಸಿಕೊಂಡು ಹೋಗುವುದು ದೊಡ್ಡ ಸವಾಲಾಗಿ ಪರಿಣಮಿಸಿದೆ. ಮಹತ್ವದ ಆರ್ಥಿಕತೆ ಪರಿಸರ ರಕ್ಷಣೆಗಳ ದ್ವಂದ್ವದ ಚರ್ಚೆಯಲ್ಲಿ ಪಾಲ್ಗೊಳ್ಳುವ ಕೈಗಾರಿಕೋದ್ಯಮವಾಗಲಿ ಅಧಿಕಾರಷಾಹಿಯಾಗಲಿ ರಾಜಕಾರಣದ ಸೂತ್ರಧಾರಿಗಳಾಗಲಿ ನಿಗರ್ಸವಾದಿಗಳನ್ನು ತತ್‌ಕ್ಷಣದಲ್ಲಿ ಆರ್ಥಿಕ ಅಭಿವೃದ್ಧಿಗೆ ತಡೆಯೊಡ್ಡುವ ಪ್ರಗತಿ ವಿರೋಧಿ 'ವೈರಾಣು'ಗಳೆಂದು ಹಣೆಪಟ್ಟಿ ಅಂಟಿಸದೆ ಬಿಡುವುದಿಲ್ಲ.

ಶ್ರೀಯುತ ಚಿದಂಬರಂ ಹಾಗೂ ಮಾಂಟೆಕ್‌ಸಿಂಗ್ ಅಹ್ಲುವಾಲಿಯಾರವರ ಹಿರಿತನದಲ್ಲಿ ಭಾರತೀಯ ಅಧಿಕಾರಷಾಹಿ ತ್ವರಿತಗತಿಯ ಆರ್ಥಿಕ ಪ್ರಗತಿಯತ್ತ ದಾಪುಗಾಲು ಹಾಕಲೆಳಸುತ್ತಿರುವ ಈ ಸಂದರ್ಭದಲ್ಲಿ ದೇಶದ ಭೂಭಾಗದ ಶೇ. 4ರಷ್ಟು ಪ್ರದೇಶದಲ್ಲಿ ಮಾತ್ರವೇ ಉಳಿದುಕೊಂಡಿರುವ ಹುಲಿ, ಆನೆ, ಖಡ್ಗಮೃಗಮತ್ತಿತರ ಅಳಿವಿನಂಚಿನಲ್ಲಿರುವ ಜೀವಿಗಳು ಅಂತ್ಯ ಕಾಣಲಿವೆಯೇ? ಅಥವಾ, ಶೇ. 8ರ ಆರ್ಥಿಕ ಅಭಿವೃದ್ಧಿಯ ಜತೆಜತೆಗೆ ಜೀವವೈವಿಧ್ಯ ಸಮೃದ್ಧವಾದ ಭಾರತ ದೇಶವೆನ್ನುವುದು ವಾಸ್ತವಿಕವಾಗಿಯೂ ಸಾಧ್ಯವಾಗಬಹುದೆ? ಖಂಡಿತ ಸಾಧ್ಯವಾಗುತ್ತದೆ. ಆದರೆ ಎರಡು ಮೂಲಭೂತ ನಿಬಂಧನೆಗಳನ್ನು ಪಾಲಿಸಿದರೆ ಮಾತ್ರ. ಮೊದಲನೆಯದು, ಆರ್ಥಿಕ ಅಭಿವೃದ್ಧಿಯ ಪಥವು ಭೂಭಾಗದ ಶೇ. 4ರಷ್ಟು ಪ್ರದೇಶದಲ್ಲಿ ಮಾತ್ರವೇ ಉಳಿದುಕೊಂಡಿರುವ ವನ್ಯಜೀವಿ ಸಂರಕ್ಷಿತ ನೆಲೆಗಳನ್ನು ಆವರಿಸಿಕೊಳ್ಳಲು ಆಸ್ಪದ ಕೊಡಬಾರದು. ಎರಡನೆಯದಾಗಿ, ಅರಣ್ಯ ಸೇವೆಯ ಅಧಿಕಾರಿಗಳು ವನ್ಯಜೀವಿ ನೆಲೆಗಳನ್ನು ಸಂರಕ್ಷಿಸುವಲ್ಲಿ ಮಾತ್ರವೇ ಕಾರ್ಯತತ್ಪರರಾಗಿದ್ದು ವೈಜ್ಞಾನಿಕ ಕ್ರಮಗಳ ಮೂಲಕ ಅರಣ್ಯ ಪ್ರದೇಶಗಳನ್ನು ನಿರ್ವಹಿಸುವಂತಾಗಬೇಕು.

ಜೀವವೈವಿಧ್ಯದ ಹಾನಿಯು ದೇಶದ ಆರ್ಥಿಕ ಅಭಿವೃದ್ಧಿಯ ಮೇಲೆ ವಿನಾಶಕಾರಿ ಪರಿಣಾಮಗಳನ್ನು ಬೀರುತ್ತದೆಯೆನ್ನುವುದಕ್ಕೆ ನಮ್ಮೆದುರು ಸ್ಪಷ್ಟ ನಿದರ್ಶನಗಳಿವೆ. ಎಲ್ಲಕ್ಕೂ ಮುಖ್ಯವಾಗಿ ನಮ್ಮದು ಕೃಷಿ ಪ್ರಧಾನವಾದ ಸಮಾಜವೆನ್ನುವುದನ್ನು ಮರೆಯಬಾರದು. ಅಂತೆಯೇ ನಮ್ಮ ದೇಶದ ಶೇ. 4ರಷ್ಟು ಪ್ರದೇಶದಲ್ಲಿ ಮಾತ್ರವೇ ಉಳಿದುಕೊಂಡಿರುವ ಜೀವವೈವಿಧ್ಯ ಸಮೃದ್ಧವಾದ ನೆಲೆಗಳು ದೇಶದ ಹವಾಮಾನವನ್ನು ನಿಯಂತ್ರಿಸುವಲ್ಲಿ, ಮಣ್ಣಿನ ಗುಣವನ್ನು ರಕ್ಷಿಸುವಲ್ಲಿ ಅಂತೆಯೇ ಇಂಗಾಲದ ಡೈ ಆಕ್ಸೈಡ್ ಅನ್ನು ಹೀರಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಎರಡನೆಯದಾಗಿ, ಈ ಅರಣ್ಯ ಪ್ರದೇಶಗಳಲ್ಲಿ ಹಲವಾರು ಆಹಾರ ಬೆಳೆಗಳ ಮೂಲವಾದ ಕಾಡುಜಾತಿಯ ಸಸ್ಯಪ್ರಭೇದಗಳು ಸೇರಿಕೊಂಡಿವೆಯೆನ್ನುವ ಮಹತ್ವದ ಅಂಶವನ್ನು ಗಮನಿಸಬೇಕು. ಆಹಾರ ಉತ್ಪಾದನೆಯಲ್ಲಿ ಸ್ವಪರಿಪೂರ್ಣತೆಯನ್ನು ಸಾಧಿಸುವುದಕ್ಕೂ ಭವಿಷ್ಯದ ಜೈವಿಕ ತಂತ್ರಜ್ಞಾನದ ಆಯ್ಕೆಗಳಿಗೂ ಈ 'ಕಾಡುಜಾತಿಯ' ಆಹಾರ ಸಸ್ಯಗಳೇ ಕೃಷಿಯ ಜೀವವಿಮಾ ಪಾಲಿಸಿಗಳೆನ್ನುವುದನ್ನು ಮರೆಯಬಾರದು. ಮೂರನೆಯದಾಗಿ, ದಿನೇ ದಿನೆ ಏರುತ್ತಿರುವ ದೇಶದ ಜನಸಂಖ್ಯೆಯ ಅತಿಮುಖ್ಯ ಅಗತ್ಯವಾದ ನೀರಿನ ಪೂರೈಕೆಗಂತೂ ಈ ಅರಣ್ಯಪ್ರದೇಶಗಳ ಮೂಲಕವಾಗಿ ಹರಿದುಬರುವ ಜಲಮೂಲಗಳೇ ಆಕರಗಳಾಗಿವೆ.

ಆದ್ದರಿಂದ, ಜೀವವೈವಿಧ್ಯ ಸಮೃದ್ಧವಾದ ಅರಣ್ಯ ಪ್ರದೇಶಗಳನ್ನು ಸಂರಕ್ಷಿಸುವುದೆಂದರೆ ನಮ್ಮ ಅಗತ್ಯಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಮಾಡುವ ಪ್ರಯತ್ನವೆಂದೇ ಅರ್ಥ. ಆದರೆ, ವನ್ಯ ಸಂಪತ್ತಿನ ನಿರ್ವಹಣೆಯಲ್ಲಿ ವೈಜ್ಞಾನಿಕ ಚಿಂತನೆಯ ಕೊರತೆಯಿಂದಲೂ ಜನಪರವಾಗಿ ಮಾತ್ರವೇ ಚಿಂತಿಸುತ್ತಲೂ ನಾವು ಈಗಾಗಲೇ ಸಾಕಷ್ಟು ಪ್ರಮಾಣದ ಜೀವವೈವಿಧ್ಯ ಸಂಪತ್ತನ್ನು ಕಳೆದುಕೊಂಡುಬಿಟ್ಟಿದ್ದೇವೆ.

> **ಬಹುಪ್ರಚಾರದ ನದಿಗಳ ಜೋಡಣೆಯ ಯೋಜನೆ, ಪಶ್ಚಿಮ ಘಟ್ಟಗಳಲ್ಲಿ ನೂರಾರು ಮಿನಿ ಜಲವಿದ್ಯುತ್ ಯೋಜನೆಗಳಿಗಾಗಿ ಕಟ್ಟೆಗಳ ನಿರ್ಮಾಣ, ಮಳೆಗಾಡುಗಳಲ್ಲಿ ಗಣಿಗಾರಿಕೆ ಮೊದಲಾದ ಹಾನಿಕಾರಕ ನಿದರ್ಶನಗಳು ನಮ್ಮ ಕಣ್ಣೆದುರಿಗೆ ವಿಜೃಂಭಿಸುತ್ತಿವೆ.**

ಇಷ್ಟಾದರೂ ವನ್ಯ ಸಂಪತ್ತಿನ ವಿನಾಶ ಮುಂದುವರಿದೇ ಇದೆ. ದೂರದೃಷ್ಟಿಯಿಲ್ಲದ ಯೋಜನೆಗಳಿಗಾಗಿಯೂ ತತ್ಕಾಲದ ಅಗತ್ಯಗಳಿಗಾಗಿಯೂ ಅರಣ್ಯನಾಶ ನಡೆಯುತ್ತಲೇ ಇದೆ. ರಾಜಕಾರಣಿಗಳು ಹಾಗೂ ಅಧಿಕಾರ ವರ್ಗದವರೊಡನೆ ಕೈಜೋಡಿಸಿದ ಕಂಟ್ರಾಕ್ಟರುಗಳೂ ಸಂಘಸಂಸ್ಥೆಗಳವರೂ ಪ್ರಬಲವಾದ ಲಾಬಿ ನಡೆಸುತ್ತ ಹಲವಾರು ಅಭಿವೃದ್ಧಿಪರ ಯೋಜನೆಗಳನ್ನು ಮುಂದೊಡ್ಡುತ್ತಿರುತ್ತಾರೆ. ಇಂತಹ ಯೋಜನೆಗಳನ್ನು ನಿಸರ್ಗದ ಮೇಲಾಗುವ ದೀರ್ಘಕಾಲದ ಪರಿಣಾಮಗಳ ಯೋಚನೆಯೇ ಇಲ್ಲದೆ ಜಾರಿಗೊಳಿಸಲಾಗುತ್ತಿದೆ.

ಬಹುಪ್ರಚಾರದ ನದಿಗಳ ಜೋಡಣೆಯ ಯೋಜನೆ, ಪಶ್ಚಿಮ ಘಟ್ಟಗಳಲ್ಲಿ ನೂರಾರು ಮಿನಿ ಜಲವಿದ್ಯುತ್ ಯೋಜನೆಗಳಿಗಾಗಿ ಕಟ್ಟೆಗಳ ನಿರ್ಮಾಣ, ಮಳೆಗಾಡುಗಳಲ್ಲಿ ಗಣಿಗಾರಿಕೆ ಮೊದಲಾದ ಹಾನಿಕಾರಕ ನಿದರ್ಶನಗಳು ನಮ್ಮ ಕಣ್ಣೆದುರಿಗೆ ವಿಜೃಂಭಿಸುತ್ತಿವೆ. ಇಂತಹ ಯೋಜನೆಗಳು ಕ್ರಮಶಃ ನಮ್ಮ ಅಮೂಲ್ಯವಾದ ಜೀವವೈವಿಧ್ಯ ಸಂಪತ್ತನ್ನು ತುಂಡುತುಂಡಾಗಿ ಕತ್ತರಿಸುತ್ತಾ ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯನಾಶ ಮಾಡುತ್ತವೆಯೇ ಹೊರತು ಬೇರೇನೂ ಸಾಧಿತವಾಗುವುದಿಲ್ಲ.

ಇನ್ನೊಂದೆಡೆ, ಗಾಯದ ಮೇಲೆ ಬರೆ ಎಳೆದಂತೆ ಅರಣ್ಯ ಸಂಪತ್ತನ್ನು ಕಬಳಿಸಲು ಭೂಮಿಗಳ್ಳರು, ಕಳ್ಳಬೇಟೆಗಾರರು, ಗಣಿಗಾರಿಕೆ ಕಂಪೆನಿಗಳು, ಮರಗಳ್ಳರು ಮತ್ತು ವಾಣಿಜ್ಯೋದ್ದೇಶಗಳಿಗಾಗಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವವರು- ಇವರೆಲ್ಲ ಸಾಲುಗಟ್ಟಿ ಹೊರಟ್ಟಿದ್ದಾರೆ. ಅತ್ಯಮೂಲ್ಯವಾದ ಅರಣ್ಯ ಸಂಪತ್ತನ್ನು ಪುನಃಸೃಷ್ಟಿ ಮಾಡುವುದು ಅಸಾಧ್ಯವೆಂದು ಗೊತ್ತಿದ್ದರೂ ಸರಕಾರವು ಈ ಲೂಟಿಯನ್ನೂ ಅದರಿಂದೊದಗುತ್ತಿರುವ ಅಪಾರ ಆರ್ಥಿಕ ಹಾನಿಯನ್ನೂ ತಡೆಯಲು ಅಸಹಾಯಕವಾಗಿದೆ.

ಜೀವವೈವಿಧ್ಯ ಸಮೃದ್ಧವಾದ ಅರಣ್ಯ ಪ್ರದೇಶಗಳು ನಮ್ಮ ದೇಶದ ಶೇ. 4ರಷ್ಟು ಪ್ರದೇಶದಲ್ಲಿ ಮಾತ್ರವೇ ಉಳಿದುಕೊಂಡಿವೆಯೆನ್ನುವ ಕಟುಸತ್ಯವನ್ನು ಮನಗಂಡು ಈ ಅಳಿದುಳಿದ ಸಂಪತ್ತನ್ನು ಉಳಿಸಿ ಕೊಳ್ಳಲು ಪ್ರಬಲವಾದ ಪರಿಹಾರೋಪಾಯಗಳನ್ನು ಜರೂರಾಗಿ ಕಂಡುಕೊಳ್ಳಬೇಕಾಗಿದೆ.

ಈಗ 'ತಾಳಿಕೆಯ ಬಳಕೆ'ಯ (ಸಸ್ಟೇನಬಲ್ ಯೂಸ್) ಸಿದ್ಧಾಂತದ ಮಾತುಗಳು ವ್ಯಾಪಕವಾಗಿ ಕೇಳಿಬರುತ್ತಿವೆ. ಆದರೆ, ಈ ಸಿದ್ಧಾಂತದ ತತ್ವಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದ್ದು, ಈ ನೀತಿಯನ್ನು ಸಾರ್ವತ್ರಿಕವಾಗಿ ಅನ್ವಯಿಸುವ ಹಾಗಿಲ್ಲವೆಂದು ಕಂಡುಕೊಳ್ಳಲಾಗಿದೆ. ನಮ್ಮ ದೇಶದಲ್ಲಿ ಉತ್ತಮ ಸ್ಥಿತಿಯಲ್ಲಿರುವ ಜೀವ ವೈವಿಧ್ಯ ಪ್ರದೇಶಗಳು ಉಳಿದುಕೊಂಡಿರುವುದೇ ಅತ್ಯಲ್ಪ. ಇದರೊಳಗೂ ಕೈಚಾಚಿ, ಶತಕೋಟಿ ಜನರ ಬೇಡಿಕೆಗಳನ್ನು ನಿರಂತರವಾಗಿ ಪೂರೈಸುವುದೆಂದರೆ ಆಗಹೋಗದ ಮಾತು.

ವೈಲ್ಡ್‌ಲೈಫ್ ಕನ್ಸರ್ವೇಷನ್ ಸೊಸೈಟಿ (WCS) ಜೀವ ಪರಿಸರಶಾಸ್ತ್ರಜ್ಞರಾದ ಡಾ. ಜಾನ್ ರಾಬಿನ್‌ಸನ್‌ರವರು 'ತಾಳಿಕೆಯ ಭೂಪ್ರದೇಶಗಳು' ಎಂಬ ನಿರ್ದಿಷ್ಟ ಸಂರಕ್ಷಣಾ ಸಿದ್ಧಾಂತವನ್ನು ಮುಂದಿರಿಸಿದ್ದಾರೆ. ಈ ಸಿದ್ಧಾಂತವು ಅಳಿವಿನಂಚಿ ನಲ್ಲಿರುವ ಜೀವಜಾತಿಗಳಿಗಾಗಿಯೂ ಜೀವವೈವಿಧ್ಯ ಸಂಪತ್ತಿಗಾಗಿಯೂ ಸಂರಕ್ಷಿತ ಅರಣ್ಯಪ್ರದೇಶಗಳನ್ನು ಕಟ್ಟುನಿಟ್ಟಾಗಿ ಕಾಯ್ದಿಡುವುದರ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಅದೇ ವೇಳೆಗೆ ಇತರ ಕೆಲವು ಸಂರಕ್ಷಿತ ಪ್ರದೇಶಗಳಲ್ಲಿರುವ ಜೀವವೈವಿಧ್ಯವು ಮಾನವಬಳಕೆಯ ಒತ್ತಡವನ್ನು ಸ್ವಲ್ಪಮಟ್ಟಿಗೆ ತಡೆದುಕೊಳ್ಳಬಹುದಾದಲ್ಲಿ ಅಂತಹ ಪ್ರದೇಶಗಳನ್ನು ಮಾತ್ರ ವಿವಿಧೋದ್ದೇಶಗಳಿಗೆ ನಿಯಂತ್ರಿತವಾಗಿ ಬಳಸಬಹುದೆಂದೂ, ಹೆಚ್ಚುತ್ತಿರುವ ಮಾನವಬೇಡಿಕೆ ಹಾಗೂ ಆಶೋತ್ತರಗಳನ್ನು ಈಡೇರಿಸಲು ಈಗಿರುವ ಕೃಷಿ, ಕೈಗಾರಿಕೆ ಹಾಗೂ ನಗರಪ್ರದೇಶಗಳನ್ನು ಬಳಸಿಕೊಳ್ಳಬಹುದೆಂದೂ ಈ ಸಿದ್ಧಾಂತವು ಪ್ರತಿಪಾದಿಸುತ್ತದೆ.

ಅತಿಹೆಚ್ಚು ಜನದಟ್ಟಣೆಯಿರುವ ಭಾರತದಂತಹ ದೇಶಕ್ಕೆ ಈ ಸಿದ್ಧಾಂತ ಸೂಕ್ತವಾಗಿ ಅನ್ವಯಿಸುವಂಥದ್ದೇ ಆಗಿದೆ. ಈ ಮಾದರಿಯನ್ನು ಅನುಸರಿಸುವುದಾದರೆ, ದೇಶವು ಶೇ. 8ರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದರೊಂದಿಗೆ, ಶೇ. 4ರಷ್ಟು ಭೂಪ್ರದೇಶದಲ್ಲಿ ಮಾತ್ರವೇ ಉಳಿದುಕೊಂಡಿರುವ ವನ್ಯಸಂಪತ್ತನ್ನೂ ಜೀವಜಗತ್ತನ್ನೂ ಉಳಿಸಿಕೊಳ್ಳುವುದು ಸಾಧ್ಯ.

**ಪ್ರವೀಣ್ ಭಾರ್ಗವ್**

ಕನ್ನಡಕ್ಕೆ: ಟಿ.ಎಸ್. ಗೋಪಾಲ್